# ಶ್ರೀ ವೇ ದ ವ್ಯಾ ಸ ಗು ರು ಭ್ಯೋ ನ ಮಃ

ವೇದಪೀಠ ವಿರಿಂಚಿಭವ ಶ-
ಕ್ರಾದಿ ಸುರ ವಿಜ್ಞಾನದಾಯಕ
ಮೋದ ಚಿನ್ಮಯ ಗಾತ್ರ ಲೋಕ ಪವಿತ್ರ ಸುಚರಿತ್ರ
ಛೇದ ಭೇದ ವಿಷಾದ ಕುಟಿಲಾಂ-
ತಾದಿ ಮಧ್ಯವಿದೂರ ಆದಾ-
ನಾದಿ ಕಾರಣ ಬಾದರಾಯಣ ಪಾಹಿ ಸುತ್ರಾಣ

ವೇದಪೀಠರಾದ ಅಂದರೆ ವೇದಗಳಿಗೆ ಆಶ್ರಯರಾದ, ವಿರಿಂಚಿ- ಬ್ರಹ್ಮ, ಭವ- ರುದ್ರ, ಶಕ್ರಾದಿ ಸುರ - ಇಂದದೇವರುಗಳಿಗೆ ವಿಜ್ಞಾನದಾಯಕ - ಉತ್ತಮ ಜ್ಞಾನದಾಯಕರಾದ, ಮೋದಚಿನ್ಮಯಗಾತ್ರ - ಆನಂದಾದಿ ಸಕಲ ಜ್ಞಾನಮಯವಾದ ಶರೀರವುಳ್ಳ, ಲೋಕಪವಿತ್ರ ಸುಚರಿತ್ರ - ಲೋಕಕ್ಕೆಲ್ಲಾ ಪವಿತ್ರರೂ, ಛೇದ ಭೇದಗಳಾಗಲಿ, ಮನಸ್ಸಿನಲ್ಲಿ ವಿಷಾದ ಕಪಟ ಬುದ್ದಿಗಳಾಗಲಿ, ಶರೀರ-ಮನಸ್ಸುಗಳೆರಡಕ್ಕೂ ಆದಿಯಾಗಲೀ ಅಂತ್ಯವಾಗಲೀ ಇಲ್ಲದ, ವೇದ ವಿಭಾಗ ಬ್ರಹ್ಮಸೂತ್ರರಚನಾದಿ ಮಹಾಕಾರ್ಯ ಮಾಡಿದವರು. ಪ್ರಸಿದ್ಧವಾದ ಬಾದರಾಯಣ ಎಂಬ ನಾಮ ಉಳ್ಳವರು. ಸಜ್ಜನ ರಕ್ಷಕರು. ಆದ ವೇದವ್ಯಾಸರೇ ನಮ್ಮನ್ನು ಕಾಪಾಡಿ, ನೀವು ನಮ್ಮನ್ನು ಕಾಪಾಡಿ.

( ಶ್ರೀ ಹ ರಿ ಕ ಥಾ ಮೃ ತ ಸಾ ರ - ಮ ಂ ಗ ಳಾ ಚ ರ ಣ ಸ ಂ ಧಿ )

ರಾ ಗ - ಕಾ ನ ಡ : ತಾ ಳ - ಆ ದಿ ತಾ ಳ

ಏನೊ ಈ ವೇಷ ವೇದವ್ಯಾಸ
ಏನೊ ಈ ವೇಷ ।ಪ।
ಭಾನುಕೋಟಿ ಪ್ರಕಾಶ ಬದರೀ ನಿವಾಸ ।ಅ ಪ।

ಮುತ್ತು ಮಾಣಿಕ್ಯ ಮುಕುಟವಿರೆ
ನೆತ್ತಿಲಿ ಕೆಂಜೆಡೆ ಪೊತ್ತುಕೊಂಡಿಪ್ಪುದು ।೧।

ದ್ರೌಪದಿ ಕರೆಯಲಪಾರವಸ್ತ್ರವನಿತ್ತೆ
ಕೌಪೀನ ಧರಿಸಿದ ಕೌತುಕವೇನಯ್ಯ ।೨।

ವರವೈಕುಂಠವ ಬಿಟ್ಟು ಮೋಹನವಿಟ್ಠಲ
ಧರೆಯೊಳು ಬೋರೆಯ ಮರದಡಿಯಲಿರುವುದು ।೩।

ರಾಗ - ಸೌರಾಷ್ಟ್ರ : ತಾಳ - ಝಂಪೆತಾಳ

ಸತ್ಯ ಜಗತಿದು ಪಂಚ ಭೇದವು ನಿತ್ಯ ಶ್ರೀಗೋವಿಂದನ
ಕೃತ್ಯವರಿತು ತಾರತಮ್ಯದಿ ಕೃಷ್ಣನಧಿಕವೆಂದು ಸಾರಿರೈ ।ಪ।

ಜೀವ ಈಶಗೆ ಭೇದ, ಸರ್ವತ್ರ ಜೀವ ಜೀವಕೆ ಭೇದವು
ಜೀವ ಜಡಕೆ, ಜಡಜಡಕೆ ಭೇದ, ಜಡ ಪರಮಾತ್ಮಗೆ ।೧।

ಮಾನುಷೋತ್ತಮರಿಗಧಿಕ ಕ್ಷಿತಿಪರು ಮನುಜದೇವಗಂಧರ್ವರು
ಜಾನಪಿತ್ರಾಜಾನಕರ್ಮಜದಾನವಾರಿತತ್ವಾತ್ಮರು ।೨।

ಗಣಪಮಿತ್ರರು ಸಪ್ತಋಷಿಗಳು ವಹ್ನಿನಾರದವರುಣರು
ಇನಜಗೆ ಸಮ ಚಂದ್ರಸೂರ್ಯರು ಮನುಸುತೆಯು ಹೆಚ್ಚು ಪ್ರವಹನು ।೩।

ದಕ್ಷಸಮ ಅನಿರುದ್ಧಗುರು ಶಚಿರತಿ ಸ್ವಾಯುಂಭುವರಾರ್ವರು
ಕಕ್ಷ ಪ್ರಾಣನಿಗಿಂತ ಕಾಮನು ಕಿಂಚಿದಧಿಕನು ಇಂದ್ರನು ।೪।

ದೇವ ಇಂದ್ರಂಗಧಿಕ ಮಹರುದ್ರ ರುದ್ರಸಮಶೇಷ ಗರುಡರು
ಕೇವಲಧಿಕರು ಗರುಡಶೇಷರಿಗೆ ದೇವಿಭಾರತಿಸರಸ್ವತಿ ।೫।

ವಾಯುವಿಗೆ ಸಮರಿಲ್ಲ ಜಗದೊಳು ವಾಯುದೇವರೆ ಬ್ರಹ್ಮರು
ವಾಯುಬ್ರಹ್ಮಗೆ ಕೋಟಿಗುಣಗಳಿಂದಧಿಕಶಕ್ತಳು ಶ್ರೀರಮಾ ।೬।

ಅನಂತಗುಣಗಳಿಂದ ಲಕುಮಿಗೆ ಅಧಿಕನು ಶ್ರೀಪುರಂದರವಿಟ್ಠಲನು
ಘನಸಮರು ಇವಗಿಲ್ಲ ಜಗದೊಳು ಹನುಮಹೃತ್ಪದ್ಮವಾಸಿಗೆ ।೭।

ರಾಗ – ಅಸಾವೇರಿ      ತಾಳ – ಆದಿತಾಳ

ಮಧ್ವಾಂತರ್ಗತ ವೇದವ್ಯಾಸ  ಮಮ–
ಹೃದ್ವನರುಹಸನ್ನಿವಾಸ ।
ಸದ್ವಿದ್ಯಾ ಕೊಡು ಶ್ರೀ ಕೃಷ್ಣದ್ವೈಪಾಯನ ಚಿದ–
ಚಿದ್ವಿಲಕ್ಷಣ ತ್ವತ್ಪಾದದ್ವಯಾಬ್ಜವ ತೋರೋ ।  ಅ.ಪ ।

ಬಾದರಾಯಣ ಬಹುರೂಪ ಸನಕಾದಿಸನ್ನುತ ಧರ್ಮಯೂಪ
ವೇದೋದ್ಧಾರಾದಾನಾದಿಕರ್ತ ಪೂರ್ಣಭೋಧಸದ್ಗುರುವರರಾಧಿತಪದಯುಗ
ಮೇದಿನಿಯೊಳಾನೋರ್ವ ಪಾಮರಾಧಮನು ಕೈಪಿಡಿ ಕರುಣಮ–
ಹೋದಧೇ ಕಮನೀಯಕಾಯ ಪ್ರಭೋಧಮುದ್ರಾಭಯಕರಾಂಬುಜ  । ೧ ।

ಹರಿತೋಪಲಾಭಶರೀರ ಪರಾಶರಮುನಿ ವರಸುಕುವರ
ಪರಮಪುರುಷಕಾರ್ತಸ್ವರಭರ್ಗ ಪ್ರಮುಖ ನಿರ್ಜರಗಣಮುನಿನುತ
ವರಪಾದಪಂಕಜ ಕುರುಕುಲದಿ ದೃತರಾಷ್ಟ್ರಪಾಂಡುವಿದುರರ
ಪಡೆದೈವರಿಗೊಲಿದು ಸಂಹರಿಸಿ ದುರ್ಯೋಧನನ ಭಾರತ–
ವಿರಚಿಸಿದ ಸುಂದರ ಕವೀಂದ್ರ ॥ ೨ ॥

ಜಾತರೂಪ ಜಟಾಜೂಟ  ಶ್ರೀನಿಕೇತನ ತಿಲಕಲಲಾಟ
ಪೀತಕೃಷ್ಣಾಜಿನ ಶ್ವೇತಶ್ರೀಯಜ್ಞೋಪವೀತ
ಮೇಖಲದಂಡಾನ್ವಿತಕಮಂಡಲ ಭೂತಭಾವನ ಭೂತಿಕೃತ್ಸ–
ದ್ಭೂತಿದಾಯಕ ಶ್ರೀಜಗನ್ನಾಥವಿಠಲ ನಾ ತುತಿಸಬಲ್ಲೆನೆ ನಿನ್ನ ಮಹಿಮೆಯ
ಸುಖಾತ್ಮ ಪಾತಕನು ಅಲ್ಪಾತುಮನು ನಾ  ॥ ೩ ॥

**ಸಂಗ್ರಹ – ನರಹರಿಸುಮಧ್ವ**